**ದಿನಾಂಕಃ 16/04/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದಃ**

1. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಪ್ರತಿವಾದಿಗಳೂ ಸಹ ನನ್ನ ವಿರುದ್ಧ ದಾವೆ ಹೂಡಿದ್ದಾರೆ ಎಂದರೆ ಸರಿ. ಆ ದಾವೆಯನ್ನು ನನ್ನ ಹೆಸರಿಗೆ ಮಾಡಿದ ಕ್ರಯಪತ್ರವನ್ನು ರದ್ದುಗೊಳಿಸಿ ಎಂದು ಪರಿಹಾರ ಕೇಳಿದ್ದಾರೆ ಎಂದರೆ ಸರಿ. ಆ ದಾವೆಯ ಸಂಃ 313/2018 ಎಂದರೆ ಸರಿ. ಆ ದಾವೆಯನ್ನು ನಮ್ಮ ಒಟ್ಟು ಕುಟುಂಬದ ಆಸ್ತಿ ಮಂಜು ರವರಿಗೆ ಮಾರಾಟ ಮಾಡುವ ಹಕ್ಕಿಲ್ಲ ಎಂದು ಹೂಡಿದ್ದಾರೆ ಎಂದರೆ ಸರಿ. ಈ ದಾವೆ ಹೂಡಿದ ನಂತರ ನನ್ನ ವಿರುದ್ಧ ಪ್ರತಿವಾದಿಗಳು ಕ್ರಿಮಿನಲ್ ಕೇಸನ್ನು ಹೂಡಿದ್ದಾರೆ ಎಂದರೆ ಸರಿ. ಅದು ಮೈಸೂರಿನ ವಿಶೇಷ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಸರಿ. ಆ ಕೇಸನ್ನು ಪ್ರತಿವಾದಿಗಳು ಉಳುಮೆ ಮಾಡುತ್ತಿದ್ದಾಗ ನಾವು ತೊಂದರೆ ನೀಡಿದ್ದೆವು ಎಂದು ಹೂಡಿದ್ದರು ಎಂದರೆ ಸರಿ.

2. ದಾವಾಸ್ವತ್ತಿನಲ್ಲಿ ನಾನು ಎಂದೂ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ದಾವೆ ಹೂಡುವ ವರ್ಷ ಯಾವ ಬೆಳೆಯನ್ನು ಬೆಳೆದಿದ್ದೆವು ಎಂದು ತಿಳಿಸಿಲ್ಲ ಎಂದರೆ ಸರಿ. ಪ್ರತಿವಾದಿಗಳು ನಮ್ಮ ಸ್ವಾಧೀನಕ್ಕೆ ತೊಂದರೆ ಕೊಟ್ಟ ಬಗ್ಗೆ ದೀಕ್ಷಿತ್ ಎಂಬುವವರು ನೋಡಿದ್ದಾರೆ. ಈ ದಾವೆಯಲ್ಲಿ ತೊಂದರೆ ಕೊಟ್ಟಿದ್ದನ್ನು ದೀಕ್ಷಿತ್ ರವರು ನೋಡಿದ್ದಾರೆಂದು ಬರೆಸಿಲ್ಲ. ನನ್ನ ದಾವೆಯಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನಗೆ ಯಾರಾದರೂ ಹೊಡೆದರೆ, ತೊಂದರೆ ಕೊಟ್ಟರೆ ಅದರ ವರ್ಷ, ತಿಂಗಳು, ದಿನಾಂಕ ಮತ್ತು ಸಮಯವನ್ನು ನಮೂದಿಸುವ ಅಭ್ಯಾಸ ಇದೆ. ಪ್ರತಿವಾದಿಗಳು 12.00–1.00 ಗಂಟೆ ಸಮಯದಲ್ಲಿ ತೊಂದರೆ ಕೊಟ್ಟರು. ನನ್ನ ವಾದಪತ್ರದಲ್ಲಿ ತೊಂದರೆ ಕೊಟ್ಟ ಸಮಯವನ್ನು ಬರೆಸಿಲ್ಲ. ವಾದಪತ್ರದ ಮಾಹಿತಿಯನ್ನು ನಾನು ನೀಡಿಲ್ಲ, ನನ್ನ ಮಗ ನೀಡಿದ್ದು ಎಂದರೆ ಸಾಕ್ಷಿಯು ನಾನು ಮತ್ತು ನನ್ನ ಮಗ ಇಬ್ಬರೂ ಮಾಹಿತಿ ನೀಡಿದ್ದೇವೆ ಎಂದು ನುಡಿಯುತ್ತಾರೆ. 2018 ರಲ್ಲಿ ಪ್ರತಿವಾದಿಗಳು ತೊಂದರೆ ಕೊಟ್ಟರು, ಆದರೆ ತಿಂಗಳು, ದಿನಾಂಕ ಮರೆತಿದ್ದೇನೆ. ಯಾವುದಾದರೂ ಘಟನೆ ನಡೆದರೆ ಅದರ ದಿನಾಂಕ, ತಿಂಗಳು,

ವರ್ಷವನ್ನು ನೆನಪಿನಲ್ಲಿಟ್ಟುಕೊಳ್ಳುವ ಅಭ್ಯಾಸ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ದಾವಾಸ್ವತ್ತಿನ ಸ್ವಾಧೀನಕ್ಕೆ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ತೊಂದರೆ ಕೊಟ್ಟರೆ ಪೊಲೀಸರಿಗೆ ದೂರನ್ನು ನೀಡುವ ಅಭ್ಯಾಸ ಇದೆ. ಈ ದಾವಾಸ್ವತ್ತಿಗೆ ತೊಂದರೆ ಕೊಟ್ಟಾಗ ದೂರನ್ನು ಸಲ್ಲಿಸಿದ್ದೇನೆ. ಸದರಿ ದೂರಿನ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಪೊಲೀಸರಿಗೆ ನೀಡಿದ ದೂರಿನ ಪ್ರಕರಣದ ಸಂಖ್ಯೆ ಮರೆತಿದ್ದೇನೆ. ಪ್ರತಿವಾದಿಗಳೇ ದಾವಾಸ್ವತ್ತಿನ ಸ್ವಾಧೀನದಲ್ಲಿರುವ ಕಾರಣ ಅವರ ಸ್ವತ್ತನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

3. ನಾನು ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನ್ಯಾಯ ಪಂಚಾಯತಿ ಮಾಡಿದರು ಎನ್ನಲಾದ ವ್ಯಕ್ತಿಗಳ ಹೆಸರು ಹೇಳಿ ಎಂದಾಗ ಸಾಕ್ಷಿಯು ಮಂಜು ಮತ್ತು ಪರಮೇಶ ಎಂದು ನುಡಿಯುತ್ತಾರೆ. ಮಂಜು ಮತ್ತು ಪರಮೇಶ ರವರು ಪಂಚಾಯತಿಯಲ್ಲಿದ್ದರು ಎಂಬ ಬಗ್ಗೆ ದಾವೆಯಲ್ಲಿ ಬರೆದಿಲ್ಲ. ಮಂಜು ಮತ್ತು ಪರಮೇಶ ರವರು ದಾವಾಸ್ವತ್ತಿನ ಆಜುಬಾಜುದಾರರಾಗಿದ್ದಾರೆ. ಪ್ರತಿವಾದಿಗಳಿಗಿಂತ ನಾವು ಆರ್ಥಿಕ ಮತ್ತು ರಾಜಕೀಯವಾಗಿ ಬಲಾಡ್ಯರಾಗಿದ್ದೇವೆ ಎಂದರೆ ಸರಿಯಲ್ಲ. ಸದರಿ ಬಲವನ್ನು ಉಪಯೋಗಿಸಿ, ದಾವಾಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಸಮನ್ಸ್ ಪ್ರತಿವಾದಿಗಳಿಗೆ ತಲುಪುವವರೆಗೂ ಪ್ರತಿವಾದಿಗಳಿಗೆ ದಾವಾಸ್ವತ್ತನ್ನು ಮಾರಾಟ ಮಾಡಿದ ಬಗ್ಗೆ ಗೊತ್ತಿರಲಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾ, 1 ನೇ ಪ್ರತಿವಾದಿಯೇ 50 ಸಾವಿರ ಹಣವನ್ನು ಸ್ವೀಕರಿಸಿದ್ದು ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ಇದೇ ಮೊದಲ ಬಾರಿಗೆ ತಿಳಿಸುತ್ತಿದ್ದೀರಿ ಎಂದರೆ ಸಾಕ್ಷಿಯು ದೂರನ್ನು ಸಹ ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ. ದೂರಿನ ಪ್ರತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ.

4. ಈ ದಾವೆ ಹೂಡುವಾಗ ಪ್ರತಿವಾದಿಗಳೇ ದಾವಾಸ್ವತ್ತಿನಲ್ಲಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇರೆಗೆ ಪ್ರತಿವಾದಿಗಳಿಗೆ ದಾವಾಸ್ವತ್ತನ್ನು ಬಿಟ್ಟುಕೊಡಿ ಎಂದು ಕೇಳಿದ್ದೀರಿ ಎಂದರೆ ಸಾಕ್ಷಿಯು ಹೌದು ಎಂದು

ನುಡಿಯುತ್ತಾ, ನಾವು ಉಳುಮೆ ಮಾಡಲು ಹೋದೆವು ಎಂದು ನುಡಿಯುತ್ತಾರೆ. ಆ ಕಾರಣಕ್ಕಾಗಿ ನಾನು ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ ಸ್ವಾಧೀನದಲ್ಲಿದ್ದೇನೆಂದು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ 1 ರಿಂದ 3 ನೇ ಪ್ರತಿವಾದಿಗಳಿಗೆ ಹಕ್ಕಿದೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿಲ್ಲದ ಕಾರಣ ಈ ದಾವೆಯ ಪರಿಹಾರ ಕೇಳಲು ಅನರ್ಹಳು ಎಂದರೆ ಸರಿಯಲ್ಲ. ಇವತ್ತಿಗೂ ಸಹ ದಾವಾಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**